ಓ ಎಸ್ ನಂ.60/2024
ಡಿ.ಡಬ್ಲ್ಯೂ-1 ಅನುಸುಬಾಯಿ ಗಂಡ ಭೀಮಣ್ಣ ಗೊಬ್ಬೂರ

**(ಇಂದು ದಿನಾಂಕಃ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಬಿ ಜೆ ವಕೀಲರಿಂದ.

ನಾನು ಶಾಲೆ ಕಲಿತಿಲ್ಲ. ವಾದಿ ಸಿದ್ದರಾಮಪ್ಪ ನನ್ನ ನಾದಿನಿಯ ಗಂಡನಾಗಿರುತ್ತಾರೆ. ನಾನು ಮನೆಗೆಲಸ ಮಾಡಿಕೊಂಡು ಮನೆಯಲ್ಲಿಯೆ ಇರುತ್ತೇನೆ. ನನ್ನ ಗಂಡ ಬೇರೆಯವರ ಹೊಲದಲ್ಲಿ ಕೆಲಸಕ್ಕೆ ಹೋಗುತ್ತಾರೆ. ಸಾಕ್ಷಿಯು ನಮಗೆ ೧೦೦ ಎಕರೆ ಜಮೀನು ಇತ್ತು, ಅದು ಎಲ್ಲಾ ಈಗ ಮಾರಿರುತ್ತೇವೆ ಎನ್ನುತ್ತಾರೆ. ನಾನು ನಮಗೆ ೧೦೦ ಎಕರೆ ಜಮೀನು ಇದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಅಕ್ಕನ ಮಗಳ ಗಂಡನ ಹತ್ತಿರ ನಾವು ದಾವಾ ಮನೆಯನ್ನು ಅಡಮಾನ ಮಾಡಿದ್ದೇವು. ನಮ್ಮ ಮನೆ ಅಡಮಾನ ಇದ್ದುದರಿಂದ ಮತ್ತು ನನ್ನ ಮಗಳ ಮದುವೆ ಇದ್ದುದರಿಂದ ನಾನು ವಾದಿಯ ಹತ್ತಿರ ಹಣದ ಸಹಾಯ ಮಾಡುವಂತೆ ಕೋರಿದ್ದೆ ಎಂದರೆ ಸರಿ. ನಾನು ನಂತರ ರೂ.೫೦೦/- ಸ್ಟ್ಯಾಂಪ್ ಪೇಪರ್ ನನ್ನ ಹೆಸರಿನಲ್ಲಿ ತಂದಿದ್ದೆ ಎಂದರೆ ಸರಿ. ನಾನು ವಾದಿಯಿಂದ ಹಣವನ್ನು ಪಡೆದು ನಿಪಿ-೧ ರಂತೆ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಅದಕ್ಕೂ ಮೊದಲು ರೂ.೧೩,೩೦,೦೦೦/- ವಾದಿಯಿಂದ ತೆಗೆದುಕೊಂಡಿದ್ದೆ, ನಂತರ ನಿಪಿ-೧ ರ ದಾಖಲೆಯನ್ನು ನೋಟರಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ.

೨. ನಾನು ವಾದಿಯಿಂದ ರೂ.೧೩,೦೦,೦೦೦/- ಹಣ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ವಾದಿಯಿಂದ ರೂ.೨೪,೦೫,೦೦೦/- ಹಣ ಪಡೆದ ಕುರಿತು ಮತ್ತು ಸದರಿ ಹಣಕ್ಕೆ ಪ್ರತಿಯಾಗಿ ನನ್ನ ಮನೆಯನ್ನು ವಾದಿಗೆ ಬಿಟ್ಟುಕೊಟ್ಟ ಕುರಿತು

ಮತ್ತು ವಾದಿ ಬ್ಯಾಂಕಿನ ಸಾಲವನ್ನು ತುಂಬುವ ಕುರಿತು ಕರಾರುಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಿಪಿ-೧ ರಲ್ಲಿ ನನ್ನ ಮತ್ತು ನನ್ನ ಗಂಡನ ಮತ್ತು ಮಗನ ಸಹಿಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಯು ನಾನು ಪಡೆದ ನಂತರ ೪-೫ ತಿಂಗಳು ಮುಗಿದ ನಂತರ ನಾನು ರೂ.೨೪,೦೫,೦೦೦/- ಹಣ ವಾದಿಗೆ ಮರಳಿ ನೀಡಿರುತ್ತೇನೆ, ಆ ಕುರಿತು ವಿಡಿಯೋ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ನಾನು ವಾದಿಗೆ ಹಣ ಮರಳಿಸಿದ ಕುರಿತು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

೩. ನಿಡಿ-೧ ರ ಪೋಟೋದಲ್ಲಿ ಕೇವಲ ವಾದಿ ಮಾತ್ರ ಇರುತ್ತಾರೆ, ಅವರ ಅಕ್ಕ-ಪಕ್ಕದಲ್ಲಿ ಯಾರ ಪೋಟೋ ಕಾಣುವುದಿಲ್ಲ ಎಂದರೆ ಸರಿ. ನಾನು ಪೋಟೋದಲ್ಲಿ ಹಣ ನೀಡುತ್ತಿರುವುದು ಕಾಣುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಾವು ಹಣವನ್ನು ನೀಡಿರುತ್ತೇವೆ ಎನ್ನುತ್ತಾರೆ. ನಿಡಿ-೧ ರ ಪೋಟೋದಲ್ಲಿ ಕಾಣುವ ರೂ.೨೪,೦೦,೦೦೦/- ಹಣ ಆಗುವುದಿಲ್ಲ ಎಂದರೆ ಸರಿಯಲ್ಲ. ನಿಡಿ-೧ ರ ಪೋಟೋವನ್ನು ನನ್ನ ಮಗನ ಮೋಬೈಲನಲ್ಲಿ ತೆಗೆದಿರುತ್ತೇವೆ. ನಾನು ವಾದಿಯಿಂದ ರೂ.೧೩,೦೦,೦೦೦/- ಹಣ ಮೊದಲು ಪಡೆದ ಕುರಿತು ಕರಾರುಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿಯು ವಾದಿ ನನಗೆ ರೂ.೧೩,೩೦,೦೦೦/- ಹಣ ನನಗೆ ನೀಡಿರುತ್ತಾರೆ. ನಾನು ವಾದಿಗೆ ರೂ.೨೪,೦೫,೦೦೦/- ಹಣವನ್ನು ಮರಳಿ ನೀಡಿರುತ್ತೇನೆ ಎನ್ನುತ್ತಾರೆ. ವಾದಿಗೆ ರೂ.೨೪,೦೫,೦೦೦/- ಹಣ ಮರಳಿ ನೀಡಲು ಸದರಿ ಹಣ ಎಲ್ಲಿಂದ ನನ್ನ ಹತ್ತಿರ ಬಂದಿತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹೇಳಿದಂತೆ ವಾದಿಗೆ ನಾನು ಮರಳಿ ರೂ.೨೪,೦೫,೦೦೦/- ಹಣ ನೀಡುವ ಶಕ್ತಿ ನನ್ನಲ್ಲಿ ಇರಲಿಲ್ಲ ಮತ್ತು ನಾನು ಸದರಿ ಹಣವನ್ನು ವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ.

೪. ನಾನು ವಾದಿಗೆ ಹಣ ಮರಳಿ ನೀಡಿರುವುದಕ್ಕೆ ಸಾಕ್ಷಿದಾರರಾಗಿ ಯಾರೂ ಇರುವುದಿಲ್ಲ. ಸಾಕ್ಷಿಯು ನಾನು ಅವರ ಮನೆಗೆ ಹೋಗಿ ಹಣ ತಂದಿದ್ದೆ. ವಾದಿ ನಮ್ಮ ಮನೆಗೆ ಬಂದು ಹಣ ತೆಗೆದುಕೊಂಡು ಹೋಗಿರುತ್ತಾರೆ ಎನ್ನುತ್ತಾರೆ. ನಾನು ವಾದಿಯಿಂದ ರೂ.೧೩,೩೦,೦೦೦/- ಹಣ ಸಾಲ ಪಡೆದಿದ್ದೆ ಮತ್ತು ಅದಕ್ಕೆ ಬಡ್ಡಿ ಸೇರಿಸಿ, ರೂ.೨೪,೦೫,೦೦೦/- ಹಣ ವಾದಿಗೆ ಮರಳಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು ೨೦ ವರ್ಷದಿಂದ ನನಗೆ ಕಷ್ಟ ಬಂದಾಗ ವಾದಿ ನನಗೆ ಸಹಾಯ ಮಾಡಿರುತ್ತಾರೆ ಎಂದರೆ ಸರಿ. ನಿಪಿ-೧ ರ ಕರಾರುಪತ್ರದಲ್ಲಿ ೭ ಜನ ಸಾಕ್ಷಿದಾರರು ಇರುತ್ತಾರೆ ಎಂದರೆ ಸಾಕ್ಷಿಯು ವಾದಿ ನಂತರ ಅವರ ಹೆಸರನ್ನು ಸೇರಿಸಿರುತ್ತಾರೆ, ಅವರು ಹಣ ಕೊಡುವಾಗ ಮತ್ತು ತೆಗೆದುಕೊಳ್ಳುವಾಗ ಯಾರೂ ಇರಲಿಲ್ಲ ಎನ್ನುತ್ತಾರೆ. ವಾದಿಗೆ ಮನೆ ಹೋಗುತ್ತದೆ ಎಂದು ನಾನು ಈಗ ವಾದಿಗೆ ಹಣ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.